ವಸಿಯ್ಯತ್ (ಮರಣಶಾಸನ) ಮಾಡಲು ಏನಾದರೂ (ವಿಷಯ/ಸಂಪತ್ತು) ಇರುವ ಯಾವುದೇ ಮುಸ್ಲಿಂ ವ್ಯಕ್ತಿಗೆ, ತನ್ನ ವಸಿಯ್ಯತ್ ಅನ್ನು ತನ್ನ ಬಳಿ ಬರೆದಿಡದೆ ಮೂರು ರಾತ್ರಿಗಳನ್ನು ಕಳೆಯುವ ಹಕ್ಕಿಲ್ಲ (ಅಥವಾ ಹಾಗೆ ಕಳೆಯುವುದು ಅವನಿಗೆ ತಕ್ಕುದಲ್ಲ)

ಇಬ್ನ್ ಉಮರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ಅವರು ಕೇಳಿದರು: "ವಸಿಯ್ಯತ್ (ಮರಣಶಾಸನ) ಮಾಡಲು ಏನಾದರೂ (ವಿಷಯ/ಸಂಪತ್ತು) ಇರುವ ಯಾವುದೇ ಮುಸ್ಲಿಂ ವ್ಯಕ್ತಿಗೆ, ತನ್ನ ವಸಿಯ್ಯತ್ ಅನ್ನು ತನ್ನ ಬಳಿ ಬರೆದಿಡದೆ ಮೂರು ರಾತ್ರಿಗಳನ್ನು ಕಳೆಯುವ
ಹಕ್ಕಿಲ್ಲ (ಅಥವಾ ಹಾಗೆ ಕಳೆಯುವುದು ಅವನಿಗೆ ತಕ್ಕುದಲ್ಲ)".. ಅಬ್ದುಲ್ಲಾ ಇಬ್ನ್ ಉಮರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ಹೇಳುತ್ತಾರೆ: "ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ಕೇಳಿದ ದಿನದಿಂದ, ನಾನು ನನ್ನ ಬಳಿ ನನ್ನ ವಸಿಯ್ಯತ್ ಬರೆದಿಡದೆ ಒಂದು ರಾತ್ರಿಯನ್ನೂ ಕಳೆದಿಲ್ಲ". [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಿಳಿಸುವುದೇನೆಂದರೆ, ಯಾವುದೇ ಮುಸ್ಲಿಂ ವ್ಯಕ್ತಿಗೆ ಹಕ್ಕುಗಳು ಅಥವಾ ಸಂಪತ್ತಿನ ವಿಷಯದಲ್ಲಿ, ಅದು ಸ್ವಲ್ಪವೇ ಆಗಿದ್ದರೂ ಸಹ, ವಸಿಯ್ಯತ್ ಮಾಡಲು ಏನಾದರೂ ಇದ್ದರೆ, ಅವನು ತನ್ನ ವಸಿಯ್ಯತ್ ಅನ್ನು ತನ್ನ ಬಳಿ ಬರೆದಿಡದೆ ಮೂರು ರಾತ್ರಿಗಳನ್ನು ಕಳೆಯುವುದು ಸೂಕ್ತವಲ್ಲ. ಅಬ್ದುಲ್ಲಾ ಇಬ್ನ್ ಉಮರ್ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ಹೇಳುತ್ತಾರೆ: ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ಕೇಳಿದ ದಿನದಿಂದ, ನಾನು ನನ್ನ ಬಳಿ ನನ್ನ ವಸಿಯ್ಯತ್ ಬರೆದಿಡದೆ ಒಂದು ರಾತ್ರಿಯನ್ನೂ ಕಳೆದಿಲ್ಲ.

http://www.sunnah.global/hadeeth/kn/show/5831